# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 833 [942] |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ [ಶಿಕ್ಷಕರ ಕ್ಷೇತ್ರ] |
| ಉತ್ತರಿಸುವ ದಿನಾಂಕ | : | 21.09.2022 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಭೂ ಸುಧಾರಣಾ ಕಾಯ್ದೆಗೆ ಇತ್ತೀಚೆಗೆ ತಿದ್ದುಪಡಿ ತರಲಾಗಿದೆಯೇ; [ವಿವರಗಳೊಡನೆ ಮಾಹಿತಿ ನೀಡುವುದು] | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 54 ಶಾಸನ 2020 ದಿನಾಂಕ: 30.12.2020 ರಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79ಎ, 79ಬಿ, 79ಸಿ, 80 ಹಾಗೂ ಇತರೆ ಕಲಂಗಳಿಗೆ ತಿದ್ದುಪಡಿ ತರಲಾಗಿದೆ.<br><br>ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎ ಅಡಿಯಲ್ಲಿ ಯಾರೇ ಕೃಷಿಕರಿದ್ದರೂ ಸಹ ಅವರ ವಾರ್ಷಿಕ ವರಮಾನ ಇತರೆ ಕೃಷಿಯೇತರದಿಂದ ರೂ.25-00 ಲಕ್ಷಗಳಿಗಿಂತ ಹೆಚ್ಚು ವರಮಾನವಿದ್ದರೆ ಕೃಷಿ ಜಮೀನು ಕೊಂಡುಕೊಳ್ಳಲು ಅರ್ಹತೆ ಇಲ್ಲವಾಗಿತ್ತು. ಅಲ್ಲದೆ, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ರ ಕಲಂ 79ಬಿ ರಡಿಯಲ್ಲಿ ಯಾರೇ ಕೃಷಿ ಜಮೀನನ್ನು ಕೃಷಿಯೇತರರು ಕೊಂಡುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲವಾಗಿತ್ತು.<br><br>ಮುಂದುವರೆದು, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ: 16199/2019ರ ಆದೇಶಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಕರ್ನಾಟಕ ಭೂ ಸುಧಾರಣೆ ಕಾಯ್ದೆಯ 1961ರ ಕಲಂ 79ಎ ಮತ್ತು 79ಬಿ ಪ್ರಕರಣಗಳನ್ನು ಕಂದಾಯ ಇಲಾಖೆಯು ನಿರ್ವಹಿಸುತ್ತಿದ್ದು, ಸಾರ್ವಜನಿಕರ ಕುಂದುಕೊರತೆಗಳಿಗೆ ಕಂದಾಯ ಅಧಿಕಾರಿಗಳು ತುರ್ತು ಸ್ಪಂದಿಸುವಂತೆ ಮತ್ತು ಸದರಿ ಪ್ರಕರಣಗಳಲ್ಲಿನ ಸೇವೆಗಳನ್ನು ಸರಳೀಕರಣಗೊಳಿಸುವ ಬಗ್ಗೆ ಕಂದಾಯ ಇಲಾಖೆಯು ಸೂಕ್ತ ಕಾರ್ಯ ಯೋಜನೆಯನ್ನು ತಯಾರಿಸುವಂತೆ ಆದೇಶ ಮಾಡಿರುತ್ತದೆ.<br><br>ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79ಎ ಮತ್ತು 79ಬಿ ಇವುಗಳಿಂದ ಯಾರು ಕೃಷಿ ಮಾಡಲು ಆಸಕ್ತಿ ಹೊಂದಿರುವವರು ಅಂತಹವರು ಕೃಷಿ ಜಮೀನನ್ನು ಖರೀದಿಸಲು ಅವಕಾಶವಿಲ್ಲವಾಗಿತ್ತು. ಅಲ್ಲದೆ, ಆರ್ಥಿಕವಾಗಿ ಸಬಲರಾಗಿದ್ದವರು ಕೃಷಿ ಭೂಮಿಯನ್ನು ಖರೀದಿಸಿ ಆಧುನಿಕ ರೀತಿಯಲ್ಲಿ ಕೃಷಿ ಮಾಡುವುದರಿಂದ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯೂ ಕೂಡ ವೃದ್ಧಿಯಾಗುತ್ತದೆ. ಮುಂದುವರೆದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರಲ್ಲಿ ಕೃಷಿ ಭೂಮಿಯನ್ನು ಖರೀದಿಸಲು ಗರಿಷ್ಠ ಮಿತಿ ನಿಗದಿಪಡಿಸಿರುವುದರಿಂದ ಒಬ್ಬ ವ್ಯಕ್ತಿಯೇ ಹೆಚ್ಚು ಜಮೀನು ಖರೀದಿಸಲು ಸಾಧ್ಯವಿರುವುದಿಲ್ಲ. ಅದೇ ರೀತಿ ಸದರಿ ಕಾಯ್ದೆಯು ಜಾರಿಗೆ ಬಂದ |

| | | |
|---|---|---|
| | | ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರ ಅಸ್ತಿತ್ವದಲ್ಲಿ ಇರುವುದಿಲ್ಲ. ಆದರೆ ಪ್ರಸ್ತುತ ನಗರ ಯೋಜನಾ ಪ್ರಾಧಿಕಾರದ ಮಾರ್ಗಸೂಚಿ ಇದ್ದು, ಅದರನ್ವಯ ಯಾವ ಉದ್ದೇಶಕ್ಕೆ ಕೃಷಿ ಭೂಮಿಯನ್ನು ಖರೀದಿಸಲಾಗಿರುತ್ತದೆಯೋ ಅದೇ ಉದ್ದೇಶಕ್ಕೆ ಅಂದರೆ ಕೃಷಿ ಉದ್ದೇಶಕ್ಕೆ ಮಾತ್ರ ಬಳಕೆ ಮಾಡಬೇಕಾಗಿರುತ್ತದೆ. ಆದುದರಿಂದ ಈ ತಿದ್ದುಪಡಿಯಿಂದ ಯಾವುದೇ ದುರುಪಯೋಗವು ಉಂಟಾಗುವುದಿಲ್ಲ. ಅಷ್ಟೆ ಅಲ್ಲದೆ, ಬಹುತೇಕ ರಾಜ್ಯಗಳಲ್ಲಿ ಇರುವ ಭೂ ಸುಧಾರಣೆ ಕಾಯ್ದೆಗಳಲ್ಲಿ ಕಲಂ 79ಎ ಮತ್ತು 79ಬಿ ಅಂತಹ ಷರತ್ತುಗಳು ಇರುವುದಿಲ್ಲ. ಆದುದರಿಂದ ಆ ರಾಜ್ಯಗಳಲ್ಲಿ ಭೂಮಿಯನ್ನು ಖರೀದಿಸಲು ಹಾಗೂ ಕೃಷಿ ಚಟುವಟಿಕೆ ಕೈಗೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ. ಆದಕಾರಣ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79ಎ ಮತ್ತು 79ಬಿ ತೆಗೆದಿರುವುದರಿಂದ ಯಾವುದೇ ಪರಿಣಾಮ ಬೀರುವುದಿಲ್ಲ. |
| (ಆ) | ಸದರಿ ಕಾಯ್ದೆಯನ್ನು ಕೇಂದ್ರ ಸರ್ಕಾರ ಹಿಂಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ಕ್ಕೆ ರಾಜ್ಯ ಸರ್ಕಾರದಲ್ಲಿ ತಿದ್ದುಪಡಿ ತರಲಾಗಿದೆ. ಸದರಿ ಕಾಯ್ದೆಯನ್ನು ರದ್ದುಪಡಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |
| (ಇ) | ರಾಜ್ಯ ಸರ್ಕಾರ ಸದರಿ ಕಾಯ್ದೆಯನ್ನು ಹಿಂಪಡೆಯದಿರಲು ಕಾರಣಗಳೇನು; | |
| (ಈ) | ಸದರಿ ಕಾಯ್ದೆಯಿಂದ ಭೂ ಹಿಡುವಳಿದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| (ಉ) | ಯಾವ ಕಾಲಮಿತಿಯಲ್ಲಿ ರಾಜ್ಯ ಸರ್ಕಾರ ಸದರಿ ಕಾಯ್ದೆಯನ್ನು ಹಿಂಪಡೆಯಲಾಗುವುದು? | |

**ಸಂಖ್ಯೆ: ಆರ್‌ಡಿ 11 ಎಲ್‌ಆರ್‌ಎಸ್ 2022**

**(ಆರ್.ಅಶೋಕ)**
**ಕಂದಾಯ ಸಚಿವರು.**